For more job news visit : www.kpscvaani.com

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ,

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ರಾಯಚೂರು-584101 .**

(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಅಂಗ ಸಂಸ್ಥೆ)

ಇ ಮೇಲ್ ವಿಳಾಸ: rchoraichur@gmail.com

ದೂರವಾಣಿ: 08532-225010

ಸಂಖ್ಯೆ : ಜಿ.ಆ&ಕು.ಕ.ಅ/ಎನ್.ಹೆಚ್.ಎಂ/ಗು-ಸಿಬ್ಬಂದಿ/139/2024-25

ದಿನಾಂಕ: 20.12.2024.

## ನೇಮಕಾತಿ ಪ್ರಕಟಣೆ

ರಾಯಚೂರು ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮ ಹಾಗೂ ಆಯುಷ್ ವಿಭಾಗದಡಿ ಈ ಕೆಳಗೆ ತೋರಿಸಿದ ಗುತ್ತಿಗೆ ಆಧಾರದ ಮೇಲೆ ಆಯುಷ್ ವೈದ್ಯರು ಹಾಗೂ ನೇತ್ರ ಸಹಾಯಕರ ಹುದ್ದೆಗಳನ್ನು ತಾತ್ಕಾಲಿಕವಾಗಿ ಮೆರಿಟ್ ಕಂ. ರೋಷ್ಟರ್ ಮೂಲಕ ಗುತ್ತಿಗೆ ಆಧಾರದ ಮೇಲೆ ಮುಂದಿನ ಆದೇಶದವರೆಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ:23.12.2024 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:06.01.2025 ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ : https://raichur.nic.in ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಷರತ್ತು ಹಾಗೂ ನಿಬಂಧನೆಗಳು ಅನ್ವಯಿಸುತ್ತವೆ.

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ವಿದ್ಯಾರ್ಹತೆ ಮತ್ತು ಸೇವಾನುಭವ | ಮಾಸಿಕ ವೇತನ | ಮೀಸಲಾತಿ | ವಯೋಮಿತಿ |
|---|---|---|---|---|---|
| 1 | ತಜ್ಞ ವೈದ್ಯರು (ಆಯುರ್ವೇದ) – 01 ಹುದ್ದೆ | **ವಿದ್ಯಾರ್ಹತೆ :** ಆಯುರ್ವೇದ ವೈದ್ಯ ಪದ್ಧತಿಯ ಕಾಯಚಿಕಿತ್ಸಾ / ಪಂಚಕರ್ಮದಲ್ಲಿ ಸ್ನಾತಕೋತ್ತರ ಪದವಿ ಹೊಂದಿರಬೇಕು. | ರೂ.46,895/- ಗಳು | **ಹೈದ್ರಾಬಾದ್ ಕರ್ನಾಟಕ – 01 ಹುದ್ದೆಗಳು :**<br>2ಎ_ಮಹಿಳೆ-01 | ಗರಿಷ್ಠ-45 ವರ್ಷ ಮೀರಿರಬಾರದು |
| 2 | ಬಿ.ಎ.ಎಂ.ಎಸ್. ವೈದ್ಯರು – 10 ಹುದ್ದೆಗಳು (5 ತಂಡಗಳು 1 ತಂಡಕ್ಕೆ 1 ಪುರುಷ ಹಾಗೂ 1 ಮಹಿಳಾ ಅಭ್ಯರ್ಥಿಗಳಂತೆ, ಒಟ್ಟು 5 ತಂಡಗಳಿಗೆ 5 ಪುರುಷ ಹಾಗೂ 5 ಮಹಿಳಾ ಅಭ್ಯರ್ಥಿಗಳು) | **ವಿದ್ಯಾರ್ಹತೆ :** ಬಿ.ಎ.ಎಂ.ಎಸ್ ವೈದ್ಯಕೀಯ ಪದ್ಧತಿಯಲ್ಲಿ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು, ಕಡ್ಡಾಯ ಹೌಸ್‌ಮನ್ ಶಿಪ್ ಅನ್ನು ಪೂರ್ಣಗೊಳಿಸಿರಬೇಕು ಹಾಗೂ ಅಂಗೀಕೃತ ನೊಂದಣಿ ಪ್ರಾಧಿಕಾರದಿಂದ ವೃತ್ತಿ ನೊಂದಣಿಯನ್ನು ಮಾಡಿಕೊಂಡಿರಬೇಕು.<br>**ಸೇವಾನುಭವ :** 2 ವರ್ಷ ಸೇವಾ ಅನುಭವ ಇನ್ ಪಬ್ಲಿಕ್ ಹೆಲ್ತ್ ಅಥವಾ ಆರೋಗ್ಯ ಕ್ಷೇತ್ರದಲ್ಲಿ/ ಎನ್.ಜಿ.ಓ.<br>**ಆದ್ಯತೆ :** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕರ್ತವ್ಯ ನಿರ್ವಹಿಸಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. | ರೂ.46,895/- ಗಳು | **ಹೈದ್ರಾಬಾದ್ ಕರ್ನಾಟಕ – 08 ಹುದ್ದೆಗಳು :**<br>ಎಸ್.ಸಿ._ಮಹಿಳೆ-01,<br>ಸಾಮಾನ್ಯ ಮಹಿಳೆ-02,<br>2ಬಿ_ಇತರೆ-01,<br>ಸಾಮಾನ್ಯ_ಗ್ರಾಮೀಣ-01,<br>2ಎ_ಮಹಿಳೆ-01,<br>ಸಾಮಾನ್ಯ_ಇತರೆ-01,<br>ಎಸ್.ಸಿ._ಗ್ರಾಮೀಣ-01,<br>**ನಾನ್ ಹೈದ್ರಾಬಾದ್ ಕರ್ನಾಟಕ – 02 ಹುದ್ದೆಗಳು :**<br>ಎಸ್.ಟಿ._ಇತರೆ-01,<br>ಸಾಮಾನ್ಯ_ಮಹಿಳೆ-01, | ಗರಿಷ್ಠ-45 ವರ್ಷ ಮೀರಿರಬಾರದು |
| 3 | ನೇತ್ರ ಸಹಾಯಕರು – 5 ಹುದ್ದೆಗಳು | **ವಿದ್ಯಾರ್ಹತೆ :** ಎರಡು ವರ್ಷದ ಡಿಪ್ಲೋಮಾ ಇನ್ ಅಪ್ಟೋಮೆಟ್ರಿ ಅಥವಾ ನೇತ್ರ ಸಹಾಯಕರು (ಅಪ್ತಾಲಮಿಕ್ ಅಸಿಸ್ಟೆಂಟ್) ಆಗಿ ಮಾನ್ಯತೆ ಪಡೆದ ಸರ್ಕಾರಿ ಆಸ್ಪತ್ರೆಗಳಲ್ಲಿ ಎನ್.ಪಿ.ಸಿ.ಬಿ. ನಿಯಮಾನುಸಾರ ತರಬೇತಿ ಪಡೆದಿರಬೇಕು. ಕಂಪ್ಯೂಟರ್ (ಎಂ.ಎಸ್. ವರ್ಡ್, ಎಂ.ಎಸ್. ಎಕ್ಸೆಲ್, ಪವರ್ ಪಾಯಿಂಟ್) ಮತ್ತು ಇಂಟರನೆಟ್ ಇತ್ಯಾದಿಗಳ ಬಳಕೆಗೆ ಬೇಕಾಗುವ ಕಂಪ್ಯೂಟರ್ ಬೇಸಿಕ್ ಕೋರ್ಸ್‌ನಲ್ಲಿ ಕಡ್ಡಾಯವಾಗಿ ಉತ್ತೀರ್ಣವಾಗಿರಬೇಕು. | ರೂ. 15397/- ಗಳು | **ಹೈದ್ರಾಬಾದ್ ಕರ್ನಾಟಕ – 04 ಹುದ್ದೆಗಳು :**<br>ಎಸ್.ಸಿ._ಇತರೆ-01,<br>ಸಾಮಾನ್ಯ_ಇತರೆ-01,<br>ಎಸ್.ಟಿ._ಇತರೆ-01,<br>ಸಾಮಾನ್ಯ_ಮಹಿಳೆ-01,<br>**ನಾನ್ ಹೈದ್ರಾಬಾದ್ ಕರ್ನಾಟಕ – 01 ಹುದ್ದೆಗಳು :**<br>ಎಸ್.ಸಿ._ಇತರೆ-01, | ಗರಿಷ್ಠ-45 ವರ್ಷ ಮೀರಿರಬಾರದು |

### ನೇಮಕಾತಿ ನಿಯಮ ಮತ್ತು ಷರತ್ತು :-

1. ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ.
2. ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 23-12-2024.
   ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06-01-2025.

For more job news visit : www.kpscvaani.com

3. ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮಗಳನ್ವಯ ವಯೋಮಿತಿಯನ್ನು ಪರಿಗಣಿಸಲಾಗುವುದು.
5. ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಢಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು.
6. ಒಬ್ಬರೇ ಅಭ್ಯರ್ಥಿಯು ವಿವಿಧ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ, ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು.
7. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರುರವರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
8. ಹುದ್ದೆಗಳ ಸಂಖ್ಯೆ ಹಾಗೂ ನೇಮಕಾತಿ ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಡಿ ಕಾಯ್ದಿರಿಸಲಾಗಿರುತ್ತದೆ.
9. ಸದರಿ ನೇಮಕಾತಿ ಪ್ರಕಟಣೆಯ ವಿವರಗಳನ್ನು ರಾಯಚೂರು ಎನ್.ಐ.ಸಿ. ವೆಬ್‌ಸೈಟ್ ಲಿಂಕ್ https://raichur.nic.in ನಲ್ಲಿ ವೀಕ್ಷಿಸಬಹುದಾಗಿದೆ.
10. ವೈದ್ಯರು ಹಾಗೂ ಇತರೆ ಹುದ್ದೆಗಳ ನೇಮಕಾತಿಯನ್ನು ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯಲ್ಲಿ ಪಡೆದ ಅಂಕಗಳು ಮತ್ತು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ ಸೇವಾನುಭವ ಅಥವಾ ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಹಿನ್ನಲೆಯಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸಿರುವ ಸೇವಾನುಭವಕ್ಕೆ ಗರಿಷ್ಠ 20 ಅಂಕಗಳ (ಒಂದು ವರ್ಷ ಸೇವಾನುಭವಕ್ಕೆ 10 ಅಂಕಗಳಂತೆ) ಕೃಪಾಂಕ ನೀಡುವುದರೊಂದಿಗೆ ಆದ್ಯತೆ ನೀಡಲಾಗುವುದು. (ಕೃಪಾಂಕ ಪಡೆಯಲು ಕಡ್ಡಾಯವಾಗಿ ಆದೇಶ ಪ್ರತಿ ಹಾಗೂ ಸೇವಾ ಅನುಭವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು).
11. ಹೈದರಾಬಾದ ಕರ್ನಾಟಕ 371 ಜೆ ಅಡಿಯಲ್ಲಿ ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಭಂದಿಸಿದ ಪಟ್ಟ ಆಯಾ ಇಲಾಖೆ/ಸಂಸ್ಥೆ ರವರಿಂದ ಪಡೆದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
12. ಗ್ರಾಮೀಣ ಅಭ್ಯರ್ಥಿ, ವಿಶೇಶ ಚೇತನರು, ಕನ್ನಡ ಮಾಧ್ಯಮ ಹಾಗೂ ಮಾಜಿ ಸೈನಿಕರು ಈ ಮೀಸಲಾತಿಗಳನ್ನು ಪಡೆಯಲು ಇಚ್ಛಿಸುವವರು ಸಂಭಂದಿಸಿದ ಪಟ್ಟ ಆಯಾ ಇಲಾಖೆ/ಸಂಸ್ಥೆ ರವರಿಂದ ಪಡೆದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
13. ಮಾನ್ಯ ಅಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ರಾಯಚೂರು ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಮೇರಿಟ್ ಕಂ ರೋಸ್ಟರ್ ಮೂಲಕ ಮೀಸಲಾತಿ ನಿಯಮಗಳನ್ವಯ ನೇಮಕಾತಿ ಮಾಡಲಾಗುವುದು. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ/ ರಾಜ್ಯ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ.
14. ಕಲ್ಯಾಣ ಕರ್ನಾಟಕ ಮೀಸಲಾತಿಯಲ್ಲಿ ಅರ್ಜಿ ಸಲ್ಲಿಸಲು ಇಚ್ಛಿಸುವವರು ಕಡ್ಡಾಯವಾಗಿ ಅನುಚ್ಛೇದ 371 (ಜೆ) ಉಪ ನಿಯಮ 3 (3) ನೇ ನಿಯಮಾನುಸಾರ ಉದ್ಯೋಗಕ್ಕಾಗಿ ಅರ್ಹತಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
15. ಈಗಾಗಲೇ ಆರೋಗ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಇಲಾಖೆಯ ಮುಖ್ಯಸ್ಥರಿಂದ ನಿರಾಪೇಕ್ಷಣಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
16. ಸ್ಥಳೀಯ ಭಾಷೆ ಕನ್ನಡ ಆಗಿರುವುದರಿಂದ ಅಭ್ಯರ್ಥಿಗಳು ಕಡ್ಡಯವಾಗಿ ಕನ್ನಡ ಭಾಷೆ ಓದಲು ಮತ್ತು ಬರೆಯಲು ತಿಳಿದಿರಬೇಕು.
17. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಜಿಲ್ಲಾ ಯೋಜನಾ ನಿರ್ವಹಣಾ ಘಟಕ ರಾಯಚೂರಿನಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ಸದಸ್ಯ ಕಾರ್ಯದರ್ಶಿ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ),
ರಾಯಚೂರು.